# ಮದ್ದಾನೆಗಳ ಗುದ್ದಾಟದಲ್ಲಿ ಬಾಳೆತೋಟ



ರಷ್ಯಾ ಮತ್ತು ಉಕ್ರೇನ್‌ಗಳ ನಡುವಣ ಯುದ್ಧದ ಪರಿಣಾಮ ಪೇಟೆಯಲ್ಲಿನ 'ಎಣ್ಣೆ'ಯ ಮೇಲಷ್ಟೇ ಅಲ್ಲ, ಮನೆಯಲ್ಲೂ ಉಂಟಾದರೆ? ವಿಶ್ವ ಮತ್ತು ವಿಶಾಲೂ ನಡುವಣ ವೈಮನಸ್ಸು ಯಾವ ಯುದ್ಧಕ್ಕೂ ಕಡಿಮೆಯಿಲ್ಲ. ಅವರ ಸಂಸಾರದಲ್ಲಿನ ಸಂಘರ್ಷ 'ವಿಶ್ವ' ಸಂಸ್ಥೆ ತಲುಪುವಷ್ಟರ ಮಟ್ಟಿಗೆ ತೀವ್ರವಾದುದು. ಆದುದಾದರೂ ಏನು? ಎಲ್ಲದಕ್ಕೂ ಕಾರಣ ವಿಶ್ವ ನೋಡಿದ 'ಫೈಲ್ಸ್' ಯಾವುದು ಎನ್ನುವುದರ ಬಗ್ಗೆ ವಿಶಾಲೂವಿಗೆ ಗೊಂದಲ. ಅಂದಹಾಗೆ, ಈ ವಿಶೇಷ ನೋಟ –ಏಪ್ರಿಲ್ 1ರ 'ನಗೆ ದಿನ'ದಲ್ಲಿ 'ಸುಧಾ' ಓದುಗರಿಗಾಗಿ ಸಿದ್ಧಗೊಂಡಿರುವ ವಿಶೇಷ ಫೈಲ್!

■ **ಎಂ.ಎಸ್. ನರಸಿಂಹಮೂರ್ತಿ**

ಕಲೆ: ಸಂತೋಷ್ ಸಸಿಹಿತ್ಲು



ರಷ್ಯಾವನ್ನು ಖ್ರುಶ್ಚೇವ್ ಆಳುತ್ತಿದ್ದ ಕಾಲ. ಆಗ ಅದೊಂದು ಪಕ್ಕಾ ಕಮ್ಯುನಿಸ್ಟ್ ಕಂಟ್ರಿ ಆಗಿತ್ತು. ರಷ್ಯಾದ ರಾಜಧಾನಿಯಾದ ಮಾಸ್ಕೋ ಸುಂದರ ನಗರ. ಅಲ್ಲಿನ ಕೆಂಪು ಚೌಕ ಬೆಂಗಳೂರಿನ ಮೆಜೆಸ್ಟಿಕ್‌ನಂತೆ ಜನಸಂದಣಿಯ ಜಾಗ.

ಒಬ್ಬ ಹುಚ್ಚ ಕೆಂಪು ಚೌಕದಲ್ಲಿ ನಿಂತು ಕೂಗಾಡಲು ಶುರು ಮಾಡಿದ. 'ಖ್ರುಶ್ಚೇವ್ ಒಬ್ಬ ಮೂರ್ಖ! ಖ್ರುಶ್ಚೇವ್ ಒಬ್ಬ ಮೂರ್ಖ!'

ಜನಕ್ಕೆ ಖುಷಿಯಾಯಿತು. ತಮಗೆ ಬೈಯಲು ಆಸೆ ಇದ್ದರೂ ಆಗದೇ ಇರುವಾಗ ಈ ಹುಚ್ಚ ಬೈಯುತ್ತಿದ್ದಾನೆ ಎಂದು ಆನಂದಪಟ್ಟರು.

ಪೊಲೀಸರು ಬಂದು ಅವನನ್ನು ಬಂಧಿಸಿದರು. ಅವನ ಮೇಲೆ ಗುರುತರವಾದ ಎರಡು ಆಪಾದನೆಗಳನ್ನು ಮಾಡಲಾಗಿತ್ತು.

1. ಸಾರ್ವಜನಿಕ ಸ್ಥಳದಲ್ಲಿ ಗಲಭೆ ಎಬ್ಬಿಸಿದ್ದು.
2. ರಾಷ್ಟ್ರೀಯ ರಹಸ್ಯವನ್ನ ಬಯಲು ಮಾಡಿದ್ದು!

ಇದು ಆ ಕಾಲದ ಜೋಕು. ಕಾಲ ಬದಲಾದರೂ ಜೋಕುಗಳು ಬದಲಾಗುವುದಿಲ್ಲ. ಇಂದು 'ಪುಟಿನ್ ಒಬ್ಬ ಮೂರ್ಖ' ಎಂದು ಜಗತ್ತೇ ಹೇಳಿದರೂ ಇದರ ಬಗ್ಗೆ ಯಾರಿಗೂ ಬೇಸರವಿಲ್ಲ. ಪುಟಿನ್ ಮುಗುಳ್ನಗುತ್ತಾ ಆ ಜೋಕನ್ನು ಸ್ವೀಕರಿಸುತ್ತಾರೆ. ತಾವೆಷ್ಟು ಮೂರ್ಖ ಎಂಬುದು ಅವರಿಗೇ ಗೊತ್ತಿರುತ್ತದೆ. ಈ ಜಗತ್ತಿನ ಮೂರ್ಖರೆಲ್ಲಾ ಒಟ್ಟಾಗಿ ಬಂದರೂ ತನಗೆ ಭಯವಿಲ್ಲ ಎಂದು ಪುಟಿನ್ ತಿಳಿದಿರಬಹುದು.

ಚಂದಮಾಮ ಕಥೆಯಲ್ಲಿ ಎರಡು ಮದ್ದಾನೆಗಳು ವೈಯಕ್ತಿಕ ದ್ವೇಷದ ಮೇಲೆ ಕಾದಾಡುತ್ತಾ ಬಂದು ಬಾಳೆ ತೋಟವನ್ನು ನಾಶ ಮಾಡಿದಂತೆ ಇವತ್ತಿನ ರಷ್ಯಾ–ಉಕ್ರೇನ್ ಕಾಳಗ ನಡೆಯುತ್ತಿದೆ. ಇತರ ದೇಶಗಳಿಗೆ ತೊಂದರೆ ಆಗುತ್ತಿದೆ.

ಗೆಳೆಯ ವಿಶ್ವ ಯುದ್ಧವನ್ನು ನಿಲ್ಲಿಸಲು ತಾನು ಏನು ಮಾಡಬಹುದೆಂದು ಯೋಚಿಸಿದ. ಸಂಸಾರ ಯುದ್ಧಗಳನ್ನು ನಿಲ್ಲಿಸುವುದರಲ್ಲಿ ವಿಶ್ವ ನಿಸ್ಸೀಮ.